# ನಗರಸಭಾ ಕಾರ್ಯಾಲಯ, ಸಾಗರ-577401.

CITY MUNICIPAL COUNCIL, SAGAR-577401
web:www.sagaracity.mrc.gov.in
email: itstaff_ulb_sagar@yahoo.com
ph: 08183-226021
fax: 08183-226021

ನಸಸಾ:ಸಿಬ್ಬಂದಿ: ಸಿ.ಆರ್: 19 /2017-18

ದಿನಾಂಕ:24-02-2018

## ಪ್ರಕಟಣೆ

ವಿಷಯ:- ಶಿವಮೊಗ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಯ ಸಾಗರ ನಗರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಪೌರಕಾರ್ಮಿಕ ನೇಮಕಾತಿ (ವಿಶೇಷ) ನಿಯಮಗಳು-2017ರ ರೀತ್ಯಾ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ರವರ ಅಧಿಸೂಚನಾ ಸಂಖ್ಯೆ SMGDC.DUDC/CR(4)/MIS-300/2017-18 (77012-9730/17-18) ದಿನಾಂಕ:19-02-2018.

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತದ ಸೂಚನೆಯಂತೆ ಶಿವಮೊಗ್ಗ ಜಿಲ್ಲೆ ನಗರ ಸ್ಥಳೀಯ ಸಂಸ್ಥೆಯ ಸಾಗರ ನಗರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2017ರ ರೀತ್ಯಾ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಹತೆಗಳು:-**

1. ಆಸಕ್ತ ಅಭ್ಯರ್ಥಿಗಳು ಸಾಗರ ನಗರಸಭೆಯಲ್ಲಿ ಕ್ಷೇಮಾಭಿವೃದ್ಧಿ, ಗುತ್ತಿಗೆ, ದಿನಗೂಲಿ, ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು ಮತ್ತು ಕನಿಷ್ಠ 2 ವರ್ಷಗಳಿಗೆ ಕಡಿಮೆ ಇಲ್ಲದಂತೆ ಪೌರಕಾರ್ಮಿಕರ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ ಅಭ್ಯರ್ಥಿಗಳಾಗಿರಬೇಕು.
2. ಸಾಗರ ನಗರಸಭೆಯಲ್ಲಿ ಕ್ಷೇಮಾಭಿವೃದ್ಧಿ, ಗುತ್ತಿಗೆ, ದಿನಗೂಲಿ, ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ 2 ವರ್ಷಗಳಿಗೂ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಡೆದ ದಾಖಲಾತಿಗಳನ್ನು ಸಲ್ಲಿಸುವುದು.
3. ಹೊರಗುತ್ತಿಗೆ ಪೌರಕಾರ್ಮಿಕರುಗಳಿಗೆ ಸಂಬಂಧಿದ ನಗರಸ್ಥಳೀಯ ಸಂಸ್ಥೆಯಿಂದ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್) ಹಾಜರಾತಿ ಮತ್ತು ವೇತನ ಪಡೆದ 2 ವರ್ಷಗಳ ದಾಖಲಾತಿಗಳನ್ನು ಪರಿಗಣಿಸಲಾಗುವುದು.
4. ಕನ್ನಡ ಮಾತನಾಡಲು ಗೊತ್ತಿರಬೇಕು.

**ಅರ್ಜಿ ಸಲ್ಲಿಸುವ ವಿಧಾನ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.**

1. ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗರವರ ಕಛೇರಿಯ ಜಿಲ್ಲಾನಗರಾಭಿವೃದ್ಧಿ ಕೋಶ ಕಛೇರಿ ಅಥವಾ ಸಾಗರ ನಗರಸಭೆಯಲ್ಲಿ ಪಡೆಯಬಹುದಾಗಿರುತ್ತದೆ.
2. **ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ:07-03-2018ರ ಒಳಗೆ ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ಕಛೇರಿಯ ಜಿಲ್ಲಾನಗರಾಭಿವೃದ್ಧಿ ಕೋಶ ಇಲ್ಲಿ ಸಂಜೆ:5.30 ಒಳಗೆ ಸಲ್ಲಿಸುವುದು.**
3. ಅರ್ಜಿಶುಲ್ಕ: ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ-1, ಅಂಗವಿಕಲ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ರೂ.100/-ಮತ್ತು ಸಾಮಾನ್ಯ ವರ್ಗ, 2ಎ, 2ಬಿ, 3ಎ 3ಬಿ ವರ್ಗದ ಅಭ್ಯರ್ಥಿಗಳಿಗೆ ರೂ.200/- ನೀಡಿ ಅರ್ಜಿಯನ್ನು ಪಡೆಯುವುದು.

ಪೌರಾಯುಕ್ತರು
ನಗರಸಭೆ ಸಾಗರ.